ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತಮೂರನೆಯ ಅಧಿವೇಶನ
ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

ತನಿಖಾಧಿಕಾರಿಗಳಿಗೆ ವೆಚ್ಚವನ್ನು ನೀಡುವ ಬಗ್ಗೆ

ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

389 (407) ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಾಸಿಕವಾಗಿ ತನಿಖಾಧಿಕಾರಿಗಳಿಗೆ ನೀಡುವ ವೆಚ್ಚವೆಷ್ಟು; ಸಿ.ಪಿ.ಐ., ಡಿ.ಎಸ್.ಪಿ., ಠಾಣಾವಾರು, ವೃತ್ತವಾರು ಉಪವಿಭಾಗಗಳ ಪ್ರತ್ಯೇಕ ವಿವರ ನೀಡುವುದು;

(ಆ) ಕಳೆದ ಮೂರು ವರ್ಷಗಳಲ್ಲಿ ತನಿಖಾ ವೆಚ್ಚದ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ; (ಜಿಲ್ಲಾವಾರು ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ತನಿಖಾಧಿಕಾರಿಗಳಿಗೆ ನೀಡಲಾದ ತನಿಖಾವೆಚ್ಚ ಎಷ್ಟು; (ವಿವರ ನೀಡುವುದು) ಪಾವತಿ ಮಾಡಿರುವ ಹಾಗೂ ಪಾವತಿಗೆ ಬಾಕಿಯಿರುವ ವೆಚ್ಚವೆಷ್ಟು? (ವಿವರಗಳನ್ನು ನೀಡುವುದು)